ರೂಪತರಾಗಿ ಕಾಣಿಸಿಕೊಳ್ಳಲಿದ್ದಾರೆ.

# ರಾಜ್ಯೋತ್ಸವ ವಿಶೇಷ



## ಶಿವಣ್ಣ ಹೊಸ ಸಿನಿಮಾ ಮಂಜುಳಾ ಗುರುರಾಜ್ ಆಲ್ಬಂ

ಕನ್ನಡ ರಾಜ್ಯೋತ್ಸವವನ್ನು ವಿಭಿನ್ನವಾಗಿ ಆಚರಿಸಲು ಸ್ಯಾಂಡಲ್‌ವುಡ್ ಸರ್ವ ಸಿದ್ಧತೆ ಮಾಡಿಕೊಂಡಿದೆ. ಕನ್ನಡಪರ ಅನೇಕ ಕಾರ್ಯಕ್ರಮಗಳಲ್ಲಿ ನಟ, ನಟಿಯರು ಮತ್ತು ತಂತ್ರಜ್ಞರು ಭಾಗಿಯಾಗುತ್ತಿದ್ದಾರೆ. ಈ ವರ್ಷ ಕನ್ನಡ ಚಿತ್ರರಂಗ ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ ಮಾಡಿಕೊಂಡಿದೆ. ಅನೇಕ ಕಲಾವಿದರು ರಾಜ್ಯದ ನಾನಾ ಭಾಗಗಳಲ್ಲಿ ನಡೆಯುವ ಕನ್ನಡದ ಹಬ್ಬದಲ್ಲಿ ತೊಡಗಿಕೊಳ್ಳುತ್ತಿದ್ದರೆ, ಕನ್ನಡ ನಾಡಿನ ಬಗೆಗಿನ ವಿಡಿಯೋ ಆಲ್ಬಂ, ಹೊಸ ಸಿನಿಮಾಗಳ ಮುಹೂರ್ತ ಮತ್ತು ಹೆಮ್ಮೆಯ ಕರುನಾಡ ಬಗೆಗಿನ ಟ್ರೇಲರ್, ಟೀಸರ್ ಅನ್ನು ರಿಲೀಸ್ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

**ಶಿವರಾಜ್ ಹೊಸ ಸಿನಿಮಾ:** ಡಾ. ರಾಜ್ ಕುಮಾರ್ ನಂತರ ಅವರ ಮಕ್ಕಳು ಮತ್ತು ಮೊಮ್ಮಕ್ಕಳು ಕೂಡ ರಾಜ್ಯೋತ್ಸವದ ಸಂದರ್ಭದಲ್ಲಿ ನಾನಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಲೇ ಇರುತ್ತಾರೆ. ಈ ಬಾರಿ ಕನ್ನಡ ಹಬ್ಬದ ಸಂದರ್ಭದಲ್ಲಿ ಶಿವರಾಜ್ ಕುಮಾರ್ ನಟನೆಯ ಹೊಸ ಸಿನಿಮಾ ಸೆಟ್ಟೇರುತ್ತಿದೆ. ಈ ಸಿನಿಮಾದ ಮೂಲಕ ಈ ಕುಟುಂಬದ ಮತ್ತೊಂದು ಕುಡಿ ಲಕ್ಕಿ ಗೋಪಾಲ್ ಸಿನಿಮಾಕ್ಕೆ ಪ್ರವೇಶ ಮಾಡಲಿದ್ದಾರೆ. ದೊಡ್ಮನೆ ಸೊಸೆಯಿಂದಿರು ಈ ಸಿನಿಮಾಗೆ ಚಾಲನೆ ನೀಡುತ್ತಿದ್ದಾರೆ.